ಇಬ್ಬರಿಗೂ ಎಚ್ಚರವಾಗುತ್ತದೆ.

ಸೋನಾಲಾಲ್ ಕನಸನ್ನು ತಾತ ಗುನ್ನಾಲಾಲನಿಗೆ ಹೇಳುತ್ತಾನೆ. ಕನಸಿನ ಒಂದೇ ಒಂದು ದೃಶ್ಯವೂ ವ್ಯತ್ಯಾಸವಿರುವುದಿಲ್ಲ. ತರಗತಿಯಲ್ಲಿ ಇಂಗ್ಲಿಷ್ ಲೆಕ್ಚರರ್ ಆಸ್ಕರ್ ವೈಲ್ಡನ 'ದಿ ರೆಡ್ ರೋಸ್ ಅಂಡ್ ದಿ ನೈಟಿಂಗೇಲ್' ಎಂಬ ಪಾಠ ಮಾಡಿದ ದಿನವೇ ಸೋನಾಲಾಲ್ ಮತ್ತು ಗುನ್ನಾಲಾಲ್ ಇಬ್ಬರಿಗೂ ಆ ಕನಸು ಬಿದ್ದಿದ್ದಿದ್ದು! ಅಂದು ಬೆಳಿಗ್ಗೆ ಸಡನ್ ಆಗಿ ಸೋನಾಲಾಲ್ ತನಗೆ ಆಸ್ಕರ್ ವೈಲ್ಡ್ ಎಂದು ಹೆಸರಿಡಬೇಕೆಂದು ಗುನ್ನಾಲಾಲನನ್ನು ಕೇಳಿಕೊಂಡಿದ್ದ. ಗುನ್ನಾಲಾಲನಿಗೂ ಆ ಹೆಸರು ಮನೋಹರವಾಗಿರುವುದೆಂದು ಅನ್ನಿಸಿ ಒಪ್ಪಿದ್ದ. ಅದಕ್ಕೂ ಮೊದಲು ಆಸ್ಕರ್ ವೈಲ್ಡನ 'ದಿ ರೆಡ್ ರೋಸ್ ಅಂಡ್ ದಿ ನೈಟಿಂಗೇಲ್' ಕಥೆಯನ್ನು ಎರಡು ಬಾರಿ ಸೋನಾಲಾಲನ ಬಳಿ ಓದಿಸಿ ಮನನ ಮಾಡಿಕೊಂಡಿದ್ದ. ಸ್ಕೂಲು, ಕಾಲೇಜಿನ ಎಲ್ಲಾ ಸರ್ಟಿಫಿಕೇಟ್‌ಗಳಲ್ಲೂ ಸೋನಾಲಾಲ್ ಎನ್ನುವ ಜಾಗದಲ್ಲಿ ಆಸ್ಕರ್ ವೈಲ್ಡ್ ಎನ್ನುವ ಹೆಸರು ರಾರಾಜಿಸತೊಡಗಿತು. ಸೋನಾಲಾಲನ ಈ ಹೆಸರು ಬದಲಾವಣೆಗೆ ಮನೆಯಲ್ಲಿ ಗುನ್ನಾಲಾಲನ ಹೆಂಡತಿ ಮತ್ತು ಸೊಸೆಯಿಂದ ತಣ್ಣನೆಯ ಪ್ರತಿರೋಧ ವ್ಯಕ್ತವಾಗಿತ್ತು. ಹಂದಿ, ದನದ ಮಾಂಸ ತಿನ್ನುವ ಕ್ರಿಶ್ಚಿಯನ್ನರ ಹೆಸರನ್ನು ತನ್ನ ಮೊಮ್ಮಗನಿಗೆ ಇಡುವುದು ಬೇಡವೆಂದು ಗುನ್ನಾಲಾಲನ ಹೆಂಡತಿ ಹಟಕ್ಕೆ ಬಿದ್ದರೆ, ತನ್ನ ಬಾಯಿಂದ ಯಾವೊತ್ತಿಗೂ ಆ ಹೆಸರನ್ನು ಉಚ್ಚಾರಣೆ ಮಾಡಲಾರೆನೆಂದು ಸೊಸೆ ಶಪಥ ಮಾಡಿದ್ದಳು. ಹೆಸರು ಬದಲಾವಣೆಯಿಂದಾಗಿ ಮನೆಯಲ್ಲಿನ ವಾತಾವರಣ ಕೆಡುವುದು ಬೇಡವೆಂದು ಗುನ್ನಾಲಾಲ್ ಮತ್ತು ಮಗ ಭವರ್ ಲಾಲ್ ಒಂದು ತೀರ್ಮಾನಕ್ಕೆ ಬಂದರು. ಅದೆಂದರೆ ಮನೆಯಲ್ಲಿ ತಾವೂ ಸೇರಿ ಎಲ್ಲರೂ ಸೋನಾಲಾಲನನ್ನು 'ಸೋನಾ' ಎಂದೇ ಕರೆಯುವುದು, ಮನೆ ಹೊರಗಿನ ಎಲ್ಲಾ ವ್ಯವಹಾರಗಳಲ್ಲೂ ಸೋನಾಲಾಲನ ಹೆಸರನ್ನು ಆಸ್ಕರ್ ವೈಲ್ಡ್ ಎಂದೇ ದಾಖಲಿಸುವುದು. ಇಂಥ ಒಂದು ಒಪ್ಪಂದಕ್ಕೆ ಭವರ್ ಲಾಲ್ ತನ್ನ ತಾಯಿ ಮತ್ತು ಹೆಂಡತಿಯನ್ನು ಒಪ್ಪಿಸಿದ್ದ. ಆ ಹೆಸರಿನಿಂದ ತಮ್ಮ ವಿದೇಶಿ ವ್ಯಾಪಾರದಲ್ಲಿ ತುಂಬಾ ಅನುಕೂಲವಾಗುತ್ತದೆಂದು ವ್ಯಾಪಾರಿ ಅಸ್ತ್ರವನ್ನು ಪ್ರಯೋಗಿಸಿದ್ದ. ಹಾಗಾಗಿಯೇ ಜೋಡಿ ಕಟ್ಟಡಗಳಿಗೆ ಆಸ್ಕರ್ ಟವರ್ಸ್ ಎಂದು ಹೆಸರಿಡಲು ಮನೆಯ ಇಬ್ಬರು ಹೆಂಗಸರೂ ಒಪ್ಪಿದ್ದರು.

ನಂತರ ಗುನ್ನಾಲಾಲನಿಗೆ ಕನಸಿನ ಬಗ್ಗೆ ತುಂಬಾ ತಲೆಕೆಡತೊಡಗಿತು. ಕನಸುಗಳು ಏಕೆ ಬೀಳುತ್ತವೆ ಮತ್ತು ಹೇಗೆ ಬೀಳುತ್ತವೆ ಎಂಬ ಹಿಂದೆ ಎಂದೂ ಕಾಡದ ಪ್ರಶ್ನೆಗಳು ಬಲವಾಗಿ ಎಡಬಿಡದೆ ಕಾಡತೊಡಗಿದವು. ಮಾಮೂಲಿಯಾಗಿ ತನ್ನ ಪಿಎ ಹರ್ಷವರ್ಧನ್ ಶಿರೋಡ್ಕರನ ಹತ್ತಿರ ಈ ಬಗ್ಗೆ ಅಭಿಪ್ರಾಯ ಕೇಳುತ್ತಾನೆ. ಶಿರೋಡ್ಕರ್ 'ನಾನು ಇಂಡಸ್ಟ್ರಿಯಲ್ ಸೈಕಾಲಜಿ ಓದುವಾಗ ಈ ಕನಸುಗಳ ಬಗ್ಗೆ ಸ್ವಲ್ಪ ಓದಿದ್ದೆ. ಕನಸುಗಳು ಏಕೆ ಮತ್ತು ಹೇಗೆ ಬೀಳುತ್ತವೆ ಎಂಬುದಕ್ಕೆ ಒಂದು ನಿರ್ದಿಷ್ಟ ಕಾರಣವಿರುವುದಿಲ್ಲ. ಕನಸುಗಳು ಮನುಷ್ಯ ನಿದ್ದೆಯಲ್ಲಿದ್ದಾಗ ಸುಪ್ತ ಮನಸ್ಸಿನಲ್ಲಿ ನಡೆಯುವ ಮಾನಸಿಕ ಚಟುವಟಿಕೆಗಳೆಂದು ಹೇಳಲಾಗುತ್ತದೆ. ವಾಸ್ತವದಲ್ಲಿ ಮನುಷ್ಯನಿಗೆ ದಕ್ಕಿಸಿಕೊಳ್ಳಲಾಗದ ಅನೇಕ ಬಯಕೆಗಳು ಸುಪ್ತಾವಸ್ಥೆಯಲ್ಲಿ ಕನಸಿನ ರೂಪದಲ್ಲಿ ಮೈಗೂಡುತ್ತವೆಂದೂ ಹೇಳಲಾಗುತ್ತದೆ. ಜಗತ್ತಿನ ಬಹುತೇಕ ಮನೋವಿಜ್ಞಾನಿಗಳು ಕನಸುಗಳಿಗೆ ಅಂಥ ಘನವಾದ ಯಾವ ಅರ್ಥವೂ ಇಲ್ಲವೆಂದು ಹೇಳುತ್ತಾರೆ. ಕೆಲವು ವಿಜ್ಞಾನಿಗಳ ಪ್ರಕಾರ ಇದುವರೆಗೂ ಕನಸುಗಳ ಮೂಲವನ್ನು ಕಂಡುಹಿಡಿಯಲು ಸಾಧ್ಯವೇ ಆಗಿಲ್ಲವಂತೆ. ಕಂಡ ಕನಸುಗಳು ನಿಜವಾದ ಕೆಲವು ಉದಾಹರಣೆಗಳೂ ಇವೆ. ಇದನ್ನು ಕೊ–ಇನ್ಸಿಡೆನ್ಸ್ ಎಂದು ಬಲವಾಗಿ ಪ್ರತಿಪಾದಿಸುವವರೂ ಬಹಳಷ್ಟು ಜನರಿದ್ದಾರೆ. ಒಟ್ಟಿನಲ್ಲಿ ಕನಸುಗಳು ಮನುಷ್ಯನನ್ನು ಬಲವಾದ ಗೊಂದಲಕ್ಕೆ ನೂಕುವುದಂತೂ ಸತ್ಯ.

'ಡ್ರೀಮ್ ಇಂಟರ್‌ಪ್ರಿಟರ್ಸ್ ಮುಂಬಯಿಯಲ್ಲೂ ಸುಮಾರು ಜನರಿದ್ದಾರೆ. ಯೋಚನೆ ಮಾಡಿ ಚಾಚಬೇಕಾದರೆ ಬೆಸ್ಟ್ ಡ್ರೀಮ್ ಇಂಟರ್‌ಪ್ರಿಟರ್ ಯಾರೆಂದು ತಿಳಿದುಕೊಂಡು ನಮ್ಮ ಆಫೀಸಿಗೆ ಕರೆಸಿದರಾಯ್ತು' ಎಂದು ಹರ್ಷವರ್ಧನ್ ಶಿರೋಡ್ಕರ್ ಮಾಮೂಲಿ ತನ್ನ ನಯನಾಜೂಕು ಧ್ವನಿಯಲ್ಲಿ ವಿನಮ್ರನಾಗಿ ಹೇಳಿದ್ದ. ಗುನ್ನಾಲಾಲನಿಗೆ ಶಿರೋಡ್ಕರನ ಮಾತುಗಳು ಹಿಡಿಸಿದವು. ಅದಕ್ಕೂ ಮೊದಲು ಗುನ್ನಾಲಾಲನ ಮನದಲ್ಲಿ ಆಲೋಚನೆಯೊಂದು ನುಸುಳಿತ್ತು. ಅದರಂತೆ ಮಧ್ಯಾಹ್ನ ಊಟವಾದ ಮೇಲೆ ಮೂರು ಗಂಟೆಯ ಮೇಲೆ ಗ್ರಾಂಟ್ ರೋಡ್ ಕಡೆಗೆ ಕಾರು ತಿರುಗಿಸಲು ಡ್ರೈವರನಿಗೆ ಹೇಳಿದ. ಗ್ರಾಂಟ್ ರೋಡಿನಲ್ಲಿ ನಡೆಯುತ್ತಾ ಸಿಮ್ರೋಜ್ ಆರ್ಟ್ ಗ್ಯಾಲರಿಯ ಮುಂದೆ ನಿಂತ. ಅರೆ, ಸೇಮ್ ಟು ಸೇಮ್ ಅದೇ ಹೆಸರಿನ ಪೇಂಟಿಂಗ್ ಅಂಗಡಿ ಕನಸಿನಲ್ಲಿ ಕಂಡಿದ್ದಿದ್ದು. ಅಂಗಡಿಯನ್ನು ಪ್ರವೇಶಿಸಿದ ಗುನ್ನಾಲಾಲನಿಗೆ ಮೂರ್ನಾಲ್ಕು ಜನ ಪೇಂಟಿಂಗ್ ನೋಡುತ್ತಿರುವುದು ಹಾಗೂ ಕೌಂಟರ್‌ನಲ್ಲಿ ಇಬ್ಬರು ಹುಡುಗಿಯರು ಇರುವುದು ಕಣ್ಣಿಗೆ ಬಿತ್ತು. ಕಂಪ್ಯೂಟರ್ ಮುಂದೆ ಕೌಂಟರಿನಲ್ಲಿ ಕುಳಿತಿದ್ದ ಹುಡುಗಿ ಹೆಚ್ಚು ಕಡಿಮೆ ರಾತ್ರಿ ಕನಸಿನಲ್ಲಿ ಕಂಡಿದ್ದ ಹುಡುಗಿಯನ್ನು ಹೋಲುತ್ತಿದ್ದಳು. ಸೀದಾ ಅವಳ ಮುಂದೆ ಹೋಗಿ ನಿಂತ ಗುನ್ನಾಲಾಲ್ ಆ ಹುಡುಗಿಯನ್ನು ಕುರಿತು 'ನಿನ್ನೆ ನಾನೇನಾದರೂ ನಿಮ್ಮ ಅಂಗಡಿಗೆ ಬಂದಿದ್ದೆನಾ' ಎಂದು ಕೇಳಿದ್ದ. ಆ ಹುಡುಗಿ ಸ್ವಲ್ಪ ಗಾಬರಿಗೊಂಡರೂ ನಂತರ ಸಾವರಿಸಿಕೊಂಡು 'ನಿನ್ನೆ ಸ್ವಲ್ಪ ರಶ್ ಇತ್ತು ಶೇಟ್ ಜಿ, ಹಾಗಾಗಿ ನೆನಪಿಗೆ ಬರುತ್ತಿಲ್ಲ. ಇಷ್ಟಕ್ಕೂ ನಿಮಗೆ ಇಂಥ ಅನುಮಾನ ಬರಲು ಕಾರಣವೇನು? ವಯಸ್ಸಾಗಿದೆ ಬೇರೆ, ಅಲ್ಜೈಮರ್ ಶುರುವಾಗಿದೆಯಾ?' ನಗುತ್ತಾ ಕೇಳಿದ್ದಳು.

ಗುನ್ನಾಲಾಲ್ ಅವಳು ಹೇಳಿದ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ 'ಆಹಾ ನಿನ್ನ ಮಾತಿನ ವೈಖರಿ ನೋಡಿದರೆ ನೀನು ಈ ಅಂಗಡಿ ಮಾಲೀಕನ ಮಗನ ಪ್ರೇಯಸಿಯೋ, ಹೆಂಡತಿಯೋ ಇರಬೇಕು' ಎಂದಿದ್ದ.

'ಓಹ್, ಶೇಟ್ ಜಿ ಎಂಥ ದೊಡ್ಡ ಮಾತು ನಿಮ್ಮದು. ನೀವು ಎಣಿಸಿದಂತೆ ಆಗಿದ್ದಿದ್ದರೆ ನಿಮ್ಮ ಬಾಯಿ ತುಂಬಾ ಬಾದಾಮ್ ಪೇಡ ತುರುಕಿಬಿಡುತ್ತಿದ್ದೆ. ಅಂಗಡಿಗೆ ಬರುವ ಸುಮಾರು ಜನ ನನ್ನನ್ನು ಹೀಗೆಯೇ ಕೇಳುತ್ತಾರೆ. ಬರಿ ಸೌಂದರ್ಯವೊಂದಿದ್ದರೆ ಸುಖವಾಗಿರೋಕೆ ಸಾಧ್ಯವಿಲ್ಲ ಶೇಟ್ ಜಿ. ಹದಿನೈದು ಸಾವಿರ ರೂಪಾಯಿ ಸಂಬಳಕ್ಕೆ ದಿನವೂ ಗಾಟ್ಕೋಪರ್‌ನಿಂದ ಲೋಕಲ್ ಟ್ರೈನ್‌ನಲ್ಲಿ ಓಡಾಡ್ತೀನಿ. ರಾತ್ರಿ ಗಾಟ್ಕೋಪರ್‌ನ ಲೋಯಲ್ ನೈಟ್ ಕ್ಲಬ್‌ನಲ್ಲಿ ಎರಡು ಗಂಟೆ ಡ್ಯಾನ್ಸ್ ಮಾಡ್ತೀನಿ. ಸೌಂದರ್ಯದ ಜೊತೆ ಅದೃಷ್ಟವೂ ಇದ್ದವರು ಮೆರೀತಾರೆ ಅಷ್ಟೆ. ಈ ಮುಂಬಯಿಯ ಅಂಗಡಿಗಳಲ್ಲಿ ಕೆಲಸ ಮಾಡುವ ಸಾವಿರಾರು ಯುವತಿಯರು ಐಶ್ವರ್ಯ ರೈ, ರಾಣಿ ಮುಖರ್ಜಿ, ಪ್ರಿಯಾಂಕಾ ಚೋಪ್ರಾ ಮುಂತಾದವರಿಗಿಂತಲೂ ಸುಂದರವಾಗಿದ್ದಾರೆ. ನನ್ನ ಅದೃಷ್ಟವೂ ಚನ್ನಾಗಿತ್ತು ಎರಡು ವರ್ಷಗಳ ಹಿಂದೆ. ನಾನು ಸಿನಿಮಾದಲ್ಲಿ ಚಿಕ್ಕ ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದೆ. ಫೈನಾನ್ಸಿಯರ್ ರಾಮದಾಸ್ ಭಂಡಾರಿ ನನ್ನನ್ನು ಲವ್ ಮಾಡತೊಡಗಿದನಲ್ಲದೆ ಹೀರೋಯಿನ್ ಮಾಡಿಕೊಂಡು ಸಿನಿಮಾ ತೆಗೆಯುತ್ತೇನೆ ಎಂದು ಭರವಸೆಯನ್ನು ಕೊಟ್ಟಿದ್ದ. ಅಂಡರ್‌ವರ್ಲ್ಡ್ ಜೊತೆ ಕನೆಕ್ಷನ್ ಇತ್ತಂತೆ. ಒಂದು ದಿನ ಮಧ್ಯಾಹ್ನ ಲೋಖಂಡ್ವಾಲದ ಅಶೋಕ ರೆಸ್ಟೋರೆಂಟ್‌ನಲ್ಲಿ ಊಟ ಮಾಡಿ ಹೊರಕ್ಕೆ ಬಂದು ಕಾರು ಹತ್ತುತ್ತಿರುವಾಗ ರೈವಲ್ ಗ್ಯಾಂಗಿನವರು ನನ್ನ ಎದುರಿನಲ್ಲಿಯೇ ರಾಮದಾಸ್ ಭಂಡಾರಿಯನ್ನು ಶೂಟ್ ಮಾಡಿದ್ದರು. ನಂತರ ಪೊಲೀಸರು ನನ್ನ ಬೆನ್ನು ಬಿದ್ದು ನುಜ್ಜುಗುಜ್ಜು ಮಾಡಿಬಿಟ್ಟರು. ನೀವೇನಾದರೂ ಸಿನಿಮಾ ಮಾಡುವುದಿದ್ದರೆ ಹೇಳಿ, ಎಂಥಾ ಹೀರೊ ಎದುರಿಗಾದದರೂ ಸೈ. ಐಯ್ಯಾಮ್ ಜಸ್ಟ್ ಟ್ವೆಂಟಿಫೋರ್ ಇಯರ್ಸ್ ರನ್ನಿಂಗ್ ನವ್' ಎಂದ ಆ ಯುವತಿಯ ಮಾತು ಕೇಳಿ ಗುನ್ನಾಲಾಲ್ ಸುಸ್ತಾಗಿ ಅಂಗಡಿ ಹೊರಗೆ ಕಾಲಿಟ್ಟ. ಆದರೂ ಅವನಿಗೆ ಸಮಾಧಾನವಾಗಲಿಲ್ಲ. ಹಾಗಾಗಿ ವಿಕ್ರಂ ಜಯಂತಿ ಲಾಲ್ ಕಂಪನಿಯ ಕಡೆ ಕಾರು ಚಲಾಯಿಸಲು ಡ್ರೈವರ್‌ಗೆ ಹೇಳಿದ್ದ.

ಜಯಂತಿ ಲಾಲ್ ಅಂಗಡಿಯಲ್ಲಿ ಇದ್ದರು. ಸಮುದಾಯದ ಕೆಲವು ಕಾರ್ಯಕ್ರಮದಲ್ಲಿ ಒಮ್ಮೆ ಇಬ್ಬರೂ ಭೇಟಿಯಾಗಿ ಪರಿಚಯವಿತ್ತು. ಜಯಂತಿ ಲಾಲ್ ಬಹಳ ಆದರದಿಂದಲೇ ಬರಮಾಡಿಕೊಂಡಿದ್ದ. ಕುಡಿಯಲು ಬಾದಾಮಿ ಹಾಲು ಕೊಟ್ಟು, ತಿನ್ನಲು ಪಾನ್ ಕೊಟ್ಟು ಬಂದ ಕಾರಣ ವಿಚಾರಿಸಿದ್ದ. ತನಗೂ, ತನ್ನ ಮೊಮ್ಮಗನಿಗೂ ಬಿದ್ದ ಕನಸಿನ ಬಗ್ಗೆ ಚಕಾರವೆತ್ತದೆ ವಜ್ರಗಳನ್ನು ಬಳಸಿ ಕಾಮನಬಿಲ್ಲಿನ ವರ್ಣಗಳುಳ್ಳ ಗುಲಾಬಿ ಹೂವನ್ನು ತಯಾರಿಸಲು ಸಾಧ್ಯವೇ ಎಂದು ಕೇಳಿದ್ದ. ವಿಕ್ರಂ ಜಯಂತಿ ಲಾಲ್ ತನ್ನ ಜೀವಮಾನದಲ್ಲಿ ಮೊಟ್ಟ ಮೊದಲ ಬಾರಿಗೆ ಇಂಥ ವಜ್ರದ ಸರಕನ್ನು ಕೇಳಿದ ಒಬ್ಬ ಗಿರಾಕಿಯನ್ನು ಕಂಡಿದ್ದ. ಅವನು ಗುನ್ನಾಲಾಲನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ–